ಎ. ಮೃತ್ಯುಂಜಯ, ಪಾಂಡವಪುರ

ಯೌವನ ಬಂದಾಗ ಪ್ರೇಮಪರೀಕ್ಷೆ. ಮುಪ್ಪಿನಲ್ಲಿ?



ಪ್ರತಿ ಅಂಗದ್ದೂ ಫ್ರೇಮ್ ಬೈ ಫ್ರೇಮ್ ಪರೀಕ್ಷೆ.

ಷಣ್ಮುಖ ಎಸ್.ಹೆಚ್. ಹಳೇಬಾತಿ ಗ್ರಾಮ

ಸಿನಿಮಾ ನಟರಿಗೂ, ರಾಜಕೀಯ ಗಣ್ಯರಿಗೂ ವ್ಯತ್ಯಾಸವೇನು?

ನಟರು ಸಂಭಾಷಣ ಚತುರರು; ರಾಜಕಾರಣಿಗಳು ಸ್ಲಂಭಾಷಣ ಚತುರರು.

ಅನಸೂಯ ಟಿ, ಕೇದಿಗೆಮನೆ

ಲಂಚ ತೆಗೆದುಕೊಳ್ಳುವುದಕ್ಕೆ ಕೈ ಬೆಚ್ಚಗೆ ಮಾಡುವುದು ಎನ್ನುವರಲ್ಲ, ಏಕೆ?

ಆ ವರೆಗೆ ಹಿಮಗಟ್ಟಿದಂತೆ ಸೆಟೆದಿದ್ದ ಕೈ ಹಣ ತಲುಪಿದ ಮೇಲೆ ಚಲನೆ ಕಾಣುವುದರಿಂದ.

ವಿ. ಹೇಮಂತಕುಮಾರ್, ಬೆಂಗಳೂರು

ಕೆಲವರು ಭಗವದ್ಗೀತೆಯನ್ನು ಮುಟ್ಟಿ ಸುಳ್ಳನ್ನು ಹೇಳ್ತಾರಲ್ಲ?



ಗೀತೆಯ ಪುಟ ಕೇವಲ ಹಾಳೆ ಎಂದು ಕಾಣುವವರ ಮನಸ್ಸು ಹಾಳೇ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ

ಅಳಿಯ ದಶಮಗ್ರಹನಾದರೆ ಅತ್ತೆ ಮಾವ ಸೊಸೆ ಮಗ ಮಗಳು ಏನಾಗಬಹುದು?

ಆಳಾಗಬಹುದು, ಹಾಳಾಗಬಹುದು.

ಹೆಚ್.ವಿ. ಶ್ರೀಧರ್, ಬೆಂಗಳೂರು

ನಟಿಯೊಬ್ಬಳು ಸದ್ದಿಲ್ಲದೆ ಮದುವೆಯಾದಳಂತೆ. ವಾಲಗದವರು ಸಿಕ್ಕಿರಲಿಲ್ಲವೆ?

ವಾಲಗದವನನ್ನೇ ಮದುವೆಯಾದಳಂತೆ – ರಿಜಿಸ್ಟರ್ಡ್ ಮ್ಯಾರೇಜ್.

ಬಿದರಹಳ್ಳಿ ವಿಜಯ, ಹಿರೇಹಡಗಲಿ

ಹುಟ್ಟಿಗೆ ಸಂಭ್ರಮಿಸುವ ನಾವು ಸಾವಿಗೆ ಸಂಭ್ರಮಿಸುವುದಿಲ್ಲ. ಏಕೆ?

ಸಾವನ್ನೂ ಸಂಭ್ರಮಿಸುತ್ತೇವೆ; ವೈಕುಂಠದಂದು ದುಃಖದ ಛಾಯೆಯನ್ನು ಕಾಣಲು ಮೈಕ್ರೋಸ್ಕೋಪ್ ಬೇಕು.

ರಾಜೇಂದ್ರ ಹೆಗಡೆ, ಹಾವೇರಿ

ಕೊನೆಗಾಲ ಬಂದಿದೆ. ಇನ್ನು ಪ್ರಶ್ನೆ ಕೇಳುವ ತಾಕತ್ತಿಲ್ಲ. ಈಗಲಾದರೂ ಬಹುಮಾನ ಕೊಡುವಿರಾ?

ಕೊಡಬಹುದಿತ್ತು. ಆ ಸಂತಸಕ್ಕೆ ಹೃದಯ ಢಂ ಎಂದೀತೆಂದು ಕೊಡುತ್ತಿಲ್ಲ.

ಶ್ರೀಕಂಠೇಶ್ವರ, ಬೆಂಗಳೂರು

ಸರ್ಕಾರಿ ಕಚೇರಿಗಳಲ್ಲಿ ಕೈ ಬಿಸಿ ಮಾಡುವುದು ಎಂದರೇನು?

ತಲೆಬಿಸಿ ತಗ್ಗಿಸಿಕೊಳ್ಳುವುದು ಎಂದು.

ಚಿದಂಬರ, ಭೀಮನಕಟ್ಟೆ

ಡಕಾಯಿತರಿಗೂ, ಖಾಸಗಿ ಆಸ್ಪತ್ರೆಗಳಿಗೂ ವ್ಯತ್ಯಾಸವೇನು?

ಡಕಾಯಿತರು ವಿಮಾ ಹಣ ಮತ್ತು ಅಂಗಾಂಗಗಳನ್ನು ಕೊಳ್ಳೆ ಹೊಡೆಯುವುದಿಲ್ಲ.

ರತ್ನಜ, ಮೈಸೂರು

ಚಿನ್ನದ ಬೆಲೆ ಗಗನಕ್ಕೇರಿದ್ದರೂ ದಿನಸಿ ಅಂಗಡಿಗಿಂತ ಚಿನ್ನದ ಅಂಗಡಿಯಲ್ಲೇ ಹೆಚ್ಚು ರಶ್ ಇದೆಯಲ್ಲ?

ತಡವಾದರೆ ತಾಳಿ ಕೊಳ್ಳಲೂ ಆಗದೆಂಬ ಯೋಚನೆಯಂತೆ.

ಸುಮಾ ರಮೇಶ್, ಹಾಸನ

ಬ್ರ್ಯಾಂಡೆಡ್ ಬಟ್ಟೆ ಧರಿಸಿದವರ ಬಾಯಲ್ಲೇ ಹೆಚ್ಚು ಅನಾಗರಿಕ ಪದಗಳು ಉದುರುತ್ತಿವೆಯಲ್ಲಾ?

ಅವರಲ್ಲಿ ಸುಸಂಸ್ಕೃತಿಯ ನರಗಳಿರುವ ಭಾಗದ ಬ್ರೈನ್ ಡೆಡ್ ಆಗಿರುತ್ತದಂತೆ.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ

ಮೆಟ್ಟಿಲು ಹತ್ತಿ ಬರುವುದೋ, ಲಿಫ್ಟ್‌ನಲ್ಲಿ ಬರುವುದೋ?

ಸಾಧಕರಾಗಬೇಕಾದರೆ ಮೆಟ್ಟಿಲು ಹತ್ತಿ; ಸಮಯಸಾಧಕರಾಗಲು ಲಿಫ್ಟ್ ಬಳಸಿ.

## ಬಹುಮಾನಿತ ಪ್ರಶ್ನೆ

ಸಿ.ಕೆ.ಗಣಪ್ಪನವರ ಮುಂಡರಗಿ

ಈಗೀಗ ಎಲ್ಲರೂ ಬೆಲ್ಲದ ಚಹಾ ಬಯಸುತ್ತಿದ್ದಾರಲ್ಲ, ಏಕಿರಬಹುದು ಸರ್?

ಒಂದೇ ತಾಯಿಯ ಮಕ್ಕಳಾದರೂ ಸಕ್ಕರೆ ವಿಲನ್, ಬೆಲ್ಲ ಹೀರೊ ಎಂಬ ಡಯಾಬಿಟಿಕ್ ನಂಬಿಕೆ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಸುಖ ಸಂಸಾರಕ್ಕೆ ನಿಮ್ಮ ಸೂಕ್ತ ಸಲಹೆ ಏನು?

ಹೋಲಿಕೆ ನಿಲ್ಲಿಸಿದರೆ ಬಾಳ್ವಿಕೆ ಸುಗಮ.

ಕೆ.ಎಂ. ವಿಭೂತಿ, ಹರಿಹರ

ಗಂಡ ಲಂಚ ಸ್ವೀಕರಿಸಲು ಹೆಂಡತಿಯ ಅತ್ಯಾಸೆಯೇ ಕಾರಣ ಅಲ್ಲವೆ?

ಸತಿಗೆ ಎರಡನೆಯ ಮದುವೆ ಇಷ್ಟವಿದ್ದರೆ ನಿಂತು ಮಾಡಿಸುವನೇನು? ಕಳ್ಳನಿಗೊಂದು ಪಿಳ್ಳೆ ನೆವ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಜನಸೇವೆಯೇ ಜನಾರ್ದನ ಸೇವೆ ಎನ್ನುವ ಶಾಸಕರಿಗೆ ಗನ್‌ಮ್ಯಾನ್ ಅಗತ್ಯ ಏನು?



ಅವರ ಸೇವೆಗೆ ಸ್ಪಂದಿಸಿ ಜನ ಕೋಲುಸೇವೆ, ಕಲ್ಲುಸೇವೆ ಮಾಡುವ ಸಾಧ್ಯತೆ ಇರುತ್ತದಲ್ಲ.

ಜಗದೀಶ ಬಿ ಹೊಸೂರು, ಮೈಸೂರು

ದೇವರು ನಿರಾಕಾರ ಎನ್ನುವ ಜನರೇ ಆಕಾರವನ್ನೇಕೆ ನೀಡಿದ್ದಾರೆ?

ಆಕಾರವಿಲ್ಲದ್ದು ಯಾವುದೇ ಆಕಾರ ಹೊಂದಬಹುದೆಂದು ತೋರ್ಪಡಿಸಲು.

ಆಶಾ ಅಪ್ರಮೇಯ, ದಾವಣಗೆರೆ

ಹಾಸಿಗೆ ಇದ್ದಷ್ಟು ಕಾಲು ಚಾಚುವ ಬದಲು ಕಾಲಿನ ಉದ್ದದ ಹಾಸಿಗೆ ಹೊಲಿಸಿಕೊಳ್ಳಬಹುದಲ್ಲವೆ?

ಅದೇ ಈಗಿನ ಟ್ರೆಂಡ್. ಸಂಬಳ ಮೀರಿ ಸಾಲದ ಕಂತು ಚಾಚುತ್ತಾರೆ.

ಬಾ.ರಂ. ಸುರೇಶ್, ತುಮಕೂರು

ಬುದ್ಧಿ ಇದ್ದೂ ಇಲ್ಲದವರ ಹಾಗೆ ನಟಿಸುತ್ತಾರಲ್ಲ, ಅವರಿಗೆ ಏನೆನ್ನಬೇಕು ಶಿವಾ?

ಬದುಕಲು ಅರಿತವನು ಎನ್ನಿ.

■ ರಾಮ್